ಸಾಕ್ಷಿಗೆ ದಿನಾಂಕಃ 18-02-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರವಾಗಿ ಶ್ರೀ ಎಸ್.ಕೆ ವಕೀಲರಿಂದಃ

ನನ್ನ ಪ್ರತಿವಾದ ಪತ್ರಕ್ಕೆ ಪೂರಕವಾಗಿ ಮತ್ತು ಹೆಚ್ಚುವರಿಯಾಗಿ ನಾನು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ. ಸಾಕ್ಷಿ ಹಾಜರುಪಡಿಸಿದ ದಾಖಲೆಗಳನ್ನು ಕೆಳಗಿನಂತೆ ನಿಶಾನೆಗಳಾಗಿ ಗುರುತಿಸಲಾಯಿತು.

ನಿ.ಡಿ.–1	ಬಗರ್ ಹುಕ್ಕುಂ ಸಾಗುವಳಿದಾರರ ಪಟ್ಟಿಯ ವಿದ್ಯುನ್ಮಾನ ದೃಢೀಕೃತ ನಕಲು
ನಿ.ಡಿ.–2	ಬಗರ್ ಹುಕ್ಕುಂ ಸಾಗುವಳಿ ನಕ್ಷೆಯ ವಿದ್ಯುನ್ಮಾನ ದೃಢೀಕೃತ ನಕಲು
ನಿ.ಡಿ.–3	ಪಕ್ಕಾ ಪುಸ್ತಕದ ದೃಢೀಕೃತ ನಕಲು
ನಿ.ಡಿ.–4	ಆಕಾರ್ ಬಂದ್ ಹುತ್ತಾರು
ನಿ.ಡಿ.–5	ಪಹಣಿ (3 ಪುಟಗಳು)
ನಿ.ಡಿ.–6	ಮ್ಯೂಟೇಷನ್
ನಿ.ಡಿ.–7 ಮತ್ತು 8	ದೃಢೀಕರಣ ಪತ್ರಗಳು
ನಿ.ಡಿ.–9	ಬ್ಯಾಂಕಿನವರು ಕೊಟ್ಟಿರುವ ದಾಖಲೆ

ಈ ಹಂತದಲ್ಲಿ ಸಾಕ್ಷಿ ಕಡೆಯಿಂದ ಮತ್ತಷ್ಟು ದಾಖಲೆಗಳನ್ನು ಹಾಜರು ಪಡಿಸುವ ಸಲುವಾಗಿ ಪ್ರತಿವಾದಿ ಪರ ವಕೀಲರು ಕೋರಿದ್ದರಿಂದ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

C/c 1 ನೇ ಹೆಚ್ಚುವರಿಸಿವಿಲ್ ನ್ಯಾಯಾಧೀಶರು,
ಭದ್ರಾವತಿ.